# ಗೋ-ಪಾಲನೆಯಲ್ಲಿ ನಿರತ ಗೋಪಾಲ್ಸ್ ತಂಡ

ನಿಮಗೆಲ್ಲಾ ತಿಳಿದಿರುವ ಹಾಗೆ ಗೋಪಾಲ್ಸ್ ತಂಡ ಸತತ 8 ವರ್ಷಗಳಿಂದ ದೇಸಿಗೋವಿನ ಮಹತ್ವವನ್ನು ಜನರಿಗೆ ತಿಳಿಸುವ ಮತ್ತು ಅವುಗಳನ್ನು ಉಳಿಸುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಗೋವಿನ ಹಾಲು ತುಪ್ಪಗಳಿಗಷ್ಟೇ ಸೀಮಿತವಾಗದೆ ಗಂಜಲ ಮತ್ತು ಸಗಣಿಯಿಂದ ಹಲವಾರು ಉತ್ಪನ್ನಗಳನ್ನು ಮಾಡುವ ತರಬೇತಿ ಕಾರ್ಯಕ್ರಮಗಳನ್ನು ಆಯೋಜನೆಮಾಡಿ ಗ್ರಾಮೀಣಾಭಿವೃದ್ಧಿಯಲ್ಲಿಯೂ ಕೈ ಜೋಡಿಸಿದೆ.

ಈಗಾಗಲೇ ಹತ್ತಕ್ಕೂ ಹೆಚ್ಚು ಗೋಶಾಲೆಗಳಲ್ಲಿ 15 ಸಾವಿರಕ್ಕೂ ಹೆಚ್ಚು ಹಣ್ಣು-ಹಂಪಲು ಮತ್ತು ಮೇವಿನ ಗಿಡಗಳನ್ನು ನೆಟ್ಟು ಪೋಷಣೆ ಮಾಡುತ್ತಾ ಬಂದಿದೆ ಗೋಪಾಲ್ಸ್ ತಂಡ. ಸ್ಪಾನ್ಸರ್ ಎ ಕಾಫ್ ಎಂಬ ಯೋಜನೆ ಅಡಿಯಲ್ಲಿ ನೂರಾರು ಗೋವುಗಳಿಗೆ ಮೇವು ಒದಗಿಸುವ ಕಾರ್ಯಕ್ರಮವನ್ನು ಸಹ ಇತ್ತೀಚೆಗೆ ಪ್ರಾರಂಭಿಸಿದೆ.

ಪ್ರತಿವರ್ಷದ ಸಂಕ್ರಾಂತಿಯಂದು ಗೋಪಾಲ್ಸ್ ತಂಡದ ಪ್ರಮುಖ ಸದಸ್ಯರುಗಳು ಯಾವುದಾದರೂ ಒಂದು ಗೋಶಾಲೆಯಲ್ಲಿ ಎರಡು ಮೂರು ದಿನ ಉಳಿದುಕೊಂಡು ತಂಡದ ಮುಂದಿನ ಯೋಜನೆಗಳನ್ನು ರೂಪಿಸಲು ಚರ್ಚಿಸುತ್ತಾರೆ. ಹೀಗೆ ವರ್ಷಕ್ಕೆ ಒಂದು ಅಥವಾ ಎರಡು ಆಲೋಚನೆಗಳೊಂದಿಗೆ ಮುಂದುವರೆಯುತ್ತಿರುವ ಗೋಪಾಲ್ಸ್ ಮುಂಬರುವ ಸಂಕ್ರಾಂತಿ ಹಬ್ಬವನ್ನು 2.01.2021 ಮತ್ತು 3.01.2021 ರಂದು ಶ್ರೀ ರಂಗನಾಥ್ ಗೌಡಿಯ ಮಠ, ಹೆಸರುಘಟ್ಟ ನಲ್ಲಿ ಮಾಡಲು ನಿಶ್ಚಯಿಸಿದೆ. ಈ ಸಂಕ್ರಾಂತಿ ಉತ್ಸವ ಬಹಳ ವಿಶೇಷವಾದದ್ದು, ಏಕೆಂದರೆ ಈ ವರ್ಷ ತೆಗೆದುಕೊಂಡಿರುವ ನಿರ್ಣಯ ಸಮಾಜಕ್ಕೆ ಬಹಳ ಉಪಯುಕ್ತವಾಗಿದೆ.



ಸುಧಾ ಸಂದೀಪ್
ಎಂ.ಎಸ್ಸಿ, ಕೃಷಿ

ಕರೋನಾ ಸಂಕಷ್ಟದಿಂದ ವಿಶ್ವವ್ಯಾಪಿ ಬಹಳ ಜನರಿಗೆ ತೊಂದರೆಯಾಗಿ ನಷ್ಟವಾಗಿರಬಹುದು. ಆದರೆ ಸಾಕಷ್ಟು ಜನರಿಗೆ ಭಾರತೀಯ ಪಾರಂಪರಿಕ ವೈದ್ಯ ಪದ್ಧತಿಗಳಾದ ಯೋಗ ಮತ್ತು ಆಯುರ್ವೇದದ ಕಡೆಗೆ ಒಲವು ಹೆಚ್ಚಾಗಿರುವುದು ಸಂತಸದ ಸಂಗತಿ. ಈ ಹಿಂದೆ ಹೇಳಿದಂತೆ ಅನೇಕ ಜನ ಅಮೃತಬಳ್ಳಿ, ನೆಲಬೇವು ಹುಡುಕಿಕೊಂಡು ನಮ್ಮ ತೋಟಕ್ಕೆ ಬಂದಿರುತ್ತಾರೆ. ಮಾನವರ ಆರೋಗ್ಯ ಕಾಪಾಡುವಲ್ಲಿ ಮನೆಮದ್ದು, ಆಯುರ್ವೇದ ಮತ್ತು ಯೋಗದಂತಹ ಭಾರತೀಯ ವಿದ್ಯೆಗಳು ಹೇಗೆ ಪರಿಣಾಮಕಾರಿಯೋ, ಪಶುಗಳ ಆರೋಗ್ಯ ರಕ್ಷಣೆಯಲ್ಲಿ ನಾಟಿವೈದ್ಯವು ಅಷ್ಟೇ ಪರಿಣಾಮಕಾರಿಯಾಗಿರುತ್ತದೆ.

ಕೆಲ ದಶಕಗಳ ಹಿಂದಿನವರೆಗೂ ರಾಸುಗಳಿಗೆ ರೋಗಬಾಧೆ ಉಂಟಾದಾಗ ನಮ್ಮೂರುಗಳಲ್ಲೇ ಇರುತ್ತಿದ್ದ ನಾಟಿ ವೈದ್ಯರು ಯಾವುದೋ ಸೊಪ್ಪನ್ನು ಅರೆದು ಹಸುಗಳಿಗೆ ಕುಡಿಸುವುದು ಅಥವಾ ಅವುಗಳ ದೇಹಕ್ಕೆ ಲೇಪನಮಾಡಿ ಗುಣಪಡಿಸುತ್ತಿದ್ದರು. ಕಾಲಕಳೆದಂತೆ ನಾಟಿವೈದ್ಯರ ಸಂಖ್ಯೆ ಇಳಿಮುಖವಾಗಿ ಪಾರಂಪರಿಕ ವೈದ್ಯ ಪದ್ಧತಿಗಳು ಕಣ್ಮರೆಯಾಗುತ್ತಾ ಬಂದಿವೆ. ಪಾಶ್ಚಿಮಾತ್ಯ ವೈದ್ಯಕೀಯ ಪದ್ಧತಿಗಳು ಎಷ್ಟೇ ಪ್ರಾಬಲ್ಯ ಸಾಧಿಸಿದರೂ, ಕೆಲ ಜನಗಳ ಆಯುರ್ವೇದದ ಕಡೆಗಿನ ಆಸಕ್ತಿ ಮತ್ತು ಸರ್ಕಾರದ ಅನೇಕ ಯೋಜನೆಗಳಿಂದ (ಉದಾ: ಆಯುಷ್ ಯೋಜನೆ) ನಾವು ಸುಸಜ್ಜಿತ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳನ್ನು ಕಾಣಬಹುದು. ಆದರೆ ನಮ್ಮೆಲ್ಲರ ನಿರ್ಲಕ್ಷ್ಯದಿಂದ ಪಶು ಆರೋಗ್ಯ ಆಸ್ಪತ್ರೆಗಳು ಮರೀಚಿಕೆಯಾಗಿವೆ. ಕ್ಷೀರಕ್ರಾಂತಿಯಿಂದ ನಮ್ಮದಲ್ಲದ ವಿದೇಶಿ ಹಸುಗಳನ್ನು ಮತ್ತು ಅದರೊಟ್ಟಿಗೆ ಹೊಸ ಹೊಸ ಖಾಯಿಲೆಗಳನ್ನು ಬರಮಾಡಕೊಳ್ಳುವ ಜೊತೆಯಲ್ಲಿ ಸರ್ಕಾರದ ಕೆಲವೊಂದು ನಿಯಮಗಳು ಮತ್ತು ಇತರ ಹಲವಾರು ಕಾರಣಗಳಿಂದ ನಾಟಿ ಪಶುವೈದ್ಯರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿ ಎಲ್ಲ ರೈತರು ವೆಟರ್ನರಿ ಡಾಕ್ಟರನ್ನು ಅವಲಂಬಿಸಬೇಕಾಗಿದೆ.

ನ್ಯಾಷನಲ್ ಡೈರಿ ಡೆವಲಪ್ಮೆಂಟ್ ಬೋರ್ಡ್‌ನ 2019ರ ಸರ್ವೇಪ್ರಕಾರ ಭಾರತದಲ್ಲಿ ಒಟ್ಟು 30.2 ಕೋಟಿ ರಾಸುಗಳಿವೆ (ಹಸು, ಎತ್ತು ಮತ್ತು ಎಮ್ಮೆಗಳು ಸೇರಿ). ಇವುಗಳಿಗೆ ಪ್ರತಿವರ್ಷ ಸರ್ಕಾರ ನಿರ್ದಿಷ್ಟ ಪ್ರಮಾಣದ ಲಸಿಕೆಗಳನ್ನು ಉಚಿತವಾಗಿ ನೀಡುತ್ತದೆ ಮತ್ತು ಸಾಕಷ್ಟು ಸಮಯದಲ್ಲಿ ರೋಗಬಾಧೆಗೆ ತುತ್ತಾದಾಗ ರೈತರೇ ಹಲವಾರು ಔಷಧಿಗಳನ್ನು ಖರೀದಿಸಿ ಶುಶ್ರೂಷೆ ಮಾಡಿಸುತ್ತಾರೆ. ಒಮ್ಮೆ ಆಲೋಚಿಸಿ ಒಂದು ಹಸುವಿನ ವರ್ಷಕ್ಕೆ ಒಮ್ಮೆ ರೋಗ ನಿವಾರಣೆಗೆ ರೈತ ವರ್ಷಕ್ಕೆ ಕನಿಷ್ಠ 500 ರೂ. ಖರ್ಚು ಮಾಡುತ್ತಾನೆ ಎಂದಿಟ್ಟುಕೊಂಡರೂ 30ಕೋಟಿ ರಾಸುಗಳಿಗೆ ಎಷ್ಟು ಸಾವಿರ ಕೋಟಿ ಆಗಬಹುದು??? ಇಲ್ಲಿ ಕೇವಲ ಹಣದ ವಿಚಾರವಷ್ಟೇ ಅಲ್ಲ, ಆಂಟಿಬಯೋಟಿಕ್ಸ್, ಹಾರ್ಮೋನ್ಸ್ ಮತ್ತಿತರ ಔಷಧಿಗಳನ್ನು ರಾಸುಗಳಿಗೆ ಕೊಟ್ಟಾಗ ನಿರ್ದಿಷ್ಟ ಸಮಯದವರೆಗೂ ಆ ಹಸುವಿನ ಹಾಲನ್ನು ಅಥವಾ ಮಾಂಸವನ್ನು ಉಪಯೋಗಿಸುವಂತಿಲ್ಲ ಎಂಬ ನಿಯಮವಿದೆ. ಔಷಧೀಯ ಅಂಶ ಹಾಲಿನ ಮುಖಾಂತರ ಮಾನವನ ದೇಹವನ್ನು ಸೇರಿ ನಾನಾ ರೀತಿಯ ತೊಂದರೆಗಳನ್ನು ಉಂಟುಮಾಡಬಹುದು.